ಋತು. ಕತ್ತಲಾವರಿಸುತ್ತಿದ್ದಂತೆ ಕಲಾವತಿ ನಿತ್ಯದಂತೆ ಬಂಗಲೆಯ ಎಲ್ಲ ದೀಪಗಳನ್ನು ಬೆಳಗಿಸಿದರು. ಕಾರ್ತೀಕ ಮಾಸವಾಗಿದ್ದರಿಂದ ಬಂಗಲೆಯೊಳಗೆ ಕಿರುಹಣತೆಗಳನ್ನು ಬೆಳಗಿಸಲು ಋತು, ರಮ್ಯರಿಗೆ ಹೇಳಿದರು. ಅದರಂತೆ ಕಿರುಹಣತೆಗಳು ಬಂಗಲೆಯೊಳಗೆ ಬೆಳಗತೊಡಗಿದ್ದವು. ಹೊರಗಿನಿಂದ ನೋಡಿದರೆ ಒಂದು ಬೆಳಕಿನ ಪ್ರಪಂಚವೇ ಅನಾವರಣಗೊಂಡಂತಿತ್ತು.

ಭಾವೀ ಅಳಿಯನಿಗಾಗಿ ಹಬ್ಬದಡುಗೆಯನ್ನೇ ಸಿದ್ಧಪಡಿಸುತ್ತಿದ್ದರು ಕಲಾವತಿ. ಸುಂದರಿಯೂ ಅಷ್ಟಿಷ್ಟು ಸಹಾಯ ಮಾಡತೊಡಗಿದ್ದಳು.

'ಋತು, ಬಾದಾಮಿ ಖೀರನ್ನು ರೆಡಿ ಮಾಡಿದ್ದೀನಿ, ಇದನ್ನು ದೇವರ ಮುಂದಿಟ್ಟು ನಮಸ್ಕಾರ ಮಾಡಿಬಿಡು....'

ಚಿಕ್ಕಮ್ಮನೆಂದಾಗ ಒಪ್ಪಿದ ಋತು ಅವರು ಕೊಟ್ಟ ಹಾಲಿನ ಬೆಳ್ಳಿಲೋಟವನ್ನು ಪಡೆದುಕೊಂಡು ದೇವರಮನೆಯತ್ತ ನಡೆದಳು. ನಂದಾದೀಪದ ನಡುವೆ ಉಜ್ವಲ ಕಾಂತಿಯಿಂದ ಹೊಳೆಯುತ್ತಿದ್ದ ದೇವತಾಮೂರ್ತಿಗಳಿಗೆ ಕೈ ಮುಗಿದು ಹಾಲಿನ ಲೋಟವನ್ನು ಮುಂದಿಟ್ಟು ತನ್ಮಯತೆಯಿಂದ ಕಣ್ಮುಚ್ಚಿದಳು. ಬಂಗಲೆಯಲ್ಲಿನ ಈ ಸಂಭ್ರಮ ಹೀಗೆಯೇ ಚಿರಕಾಲ ಉಳಿಯಲೆಂದು ಆ ಅವ್ಯಕ್ತ ಶಕ್ತಿಯಲ್ಲಿ ಪ್ರಾರ್ಥಿಸಿದಳು.

ಅಷ್ಟರಲ್ಲಿ ಯಾವುದೋ ಒಂದು ಪ್ರಾಣಿ ತನ್ನ ಮೈ ಮೇಲೆ ಬಿದ್ದಂತಾಗಿ ಮುಂದಿದ್ದ ಬೆಳ್ಳಿಲೋಟವನ್ನು ಬೀಳಿಸಿದಾಗ ಬೆಚ್ಚಿ ಕಣ್ತೆರೆದಳು. ಕಪ್ಪಗಿನ ದೊಡ್ಡ ಆಕೃತಿಯ ಒಂದು ಭಯಂಕರವಾದ ಬೆಕ್ಕು....ಹಾಲಿನ ಲೋಟ ಕೆಳಬಿದ್ದು ಕುಡಿಯಲಾಗದೆ ಹೋದ ಆಕ್ರೋಶ ಅದರ ಕಣ್ಣುಗಳಲ್ಲಿದ್ದಂತಿತ್ತು. ಅದರ ಹಸಿರು ಕಣ್ಣುಗಳು ನಿರ್ಭಯದಿಂದ ಋತುವನ್ನೇ ದಿಟ್ಟಿಸಿದವು. ಕಿಟಾರನೆ ಕಿರುಚಿದ ಋತು ದೇವರಮನೆಯಿಂದ ಹೊರಗೋಡಿ ಬಂದಳು. ಪಕ್ಕದ ಡೈನಿಂಗ್ ಹಾಲಿನಲ್ಲಿದ್ದ ರಮ್ಯ ಹಾಗೂ ಕಲಾವತಿಯರು ಋತು ಕಿರುಚಿದ ಸದ್ದಿಗೆ ಹೆದರಿಕೊಂಡು ಹೊರಗೋಡಿ ಬಂದರು. ಹೆದರಿಕೆಯಿಂದ ಥರಗುಟ್ಟುತ್ತಿರುವ ಬಂಗಲೆಯ ರಾಜಕುಮಾರಿ....

'ಏನಾಯ್ತು ಋತು?'

ಕಲಾವತಿ ಓಡಿ ಹೋಗಿ ಋತುವನ್ನು ಹಿಡಿದುಕೊಂಡರು. ರಮ್ಯಾಳ ಸಹಾಯದಿಂದ ಅವಳನ್ನು ಕುರ್ಚಿಯ ಮೇಲೆ ಕುಳ್ಳಿರಿಸಿದರು.

'ಹೇಳು ಋತು....ಏನಾಯ್ತು?' ಭಯದಿಂದ ಬಿಳಿಚಿಕೊಂಡಿದ್ದ ಋತುವಿಗೆ ಚಿಕ್ಕಮ್ಮನ ಪ್ರಶ್ನೆಗೆ ಉತ್ತರಿಸಲಾಗಲಿಲ್ಲ.

'ಚಿಕ್ಕಮ್ಮ....ಅದು....ದೇವರಮನೆಯಲ್ಲಿ ಕಪ್ಪು ಬೆಕ್ಕು...' ನಡುಗುವ ಧ್ವನಿಯಲ್ಲಿ ಹೇಳಿದಳು ಋತು.

ಋತುವಿನ ಮಾತಿನಿಂದ ಕಲಾವತಿಗೆ ಆಶ್ಚರ್ಯವಾಯಿತು. ಬೆಕ್ಕು.... ಅದರಲ್ಲೂ ಕಪ್ಪು ಬೆಕ್ಕು....ಬಂಗಲೆಯಲ್ಲಿ ಹೇಗೆ ಕಾಣಲು ಸಾಧ್ಯ? ಪುರುಷೋತ್ತಮರಿಗೆ ಮೊದಲಿನಿಂದಲೂ ಸಾಕುಪ್ರಾಣಿಗಳೆಂದರೆ ಅಲರ್ಜಿಯೇ. ಹಾಗಾಗಿ ಬಂಗಲೆಯಲ್ಲಿ ನಾಯಿ ಬೆಕ್ಕು ಮುಂತಾದ ಪ್ರಾಣಿಗಳಿಗೆ ಜಾಗವೇ ಇರಲಿಲ್ಲ. ಹೀಗಿರುವಾಗ ಕಪ್ಪು ಬೆಕ್ಕು ಎಲ್ಲಿಂದ ಬಂತು?

ರಮ್ಯಾಳನ್ನು ಋತುವಿನ ಯೋಗಕ್ಷೇಮವನ್ನು ನೋಡಿಕೊಳ್ಳಲು ಬಿಟ್ಟು ಕಲಾವತಿ ದೇವರಮನೆಯತ್ತ ಓಡಿದರು. ಅಲ್ಲಿನ ದೃಶ್ಯವನ್ನು ನೋಡಿ ಅವರ ಹೃದಯವೂ ಒಂದು ಕ್ಷಣ ಥವಗುಟ್ಟಿತು. ನಿಜವೇ....ದೊಡ್ಡದಾದ ಕಪ್ಪು ಬೆಕ್ಕೊಂದು ನೆಲದ ಮೇಲೆ ಚೆಲ್ಲಿದ್ದ ಹಾಲನ್ನು ನೆಕ್ಕುತ್ತಿದೆ. ಅದನ್ನು ಓಡಿಸಲು ಯತ್ನಿಸಿದಾಗ ಅದು ಒಮ್ಮೆ ಕೆಕ್ಕರಿಸಿಕೊಂಡು ಅವರತ್ತ ನೋಡಿ ಬಂಗಲೆಯ ಹಿಂಭಾಗದತ್ತ ಓಡಿ ಕಣ್ಮರೆಯಾಯಿತು.

ಆ ದೃಶ್ಯವನ್ನು ನೋಡಿ ಕಲಾವತಿಯೂ ಒಂದು ಕ್ಷಣ ನಡುಗಿದರು. ಆದರೆ ಭಯಪಡುವ ಸಮಯ ಇದಲ್ಲವೆನಿಸಿ ಸಹಜವಾಗಿರಲು ಯತ್ನಿಸಿದರು. ದೇವರ ಮನೆಯನ್ನು ಸ್ವಚ್ಛಗೊಳಿಸಿದರೂ ಮನಸ್ಸಿನಲ್ಲಿ ಎಂಥದೋ ಕಸಿವಿಸಿ. ಈ ದಿನ ಬಂಗಲೆಯ ಭಾವೀ ಅಳಿಯ ಆಗಮಿಸುತ್ತಿದ್ದಾನೆ. ಅಂಥ ಸಮಯದಲ್ಲಿ ಅಪಶಕುನವೆಂಬಂತೆ ಕಪ್ಪು ಬೆಕ್ಕು ದೀಪ ಹಚ್ಚುವ ಸಮಯದಲ್ಲಿ ಕಾಣಿಸಿಕೊಂಡಿದೆ. ಅಷ್ಟೇ ಅಲ್ಲ, ಹಾಲಿನ ಲೋಟವನ್ನೂ ಕೆಳಕ್ಕೆ ಕೆಡವಿದೆ. ಬಂಗಲೆಯ ಜನಗಳಿಗೆ ಮುಂದೇನು ದುರ್ಗತಿ ಕಾದಿದೆಯೋ....ಈ ಕೋಟೆ ಬಂಗಲೆ ಯಾರಿಗೂ, ಯಾವ ವಿಧದಲ್ಲೂ ಒಳ್ಳೆಯದನ್ನು ಮಾಡಿಲ್ಲವಲ್ಲ.... ಕಲಾವತಿಯ ಯೋಚನೆಗಳು ನಿರಂತರ ಸಾಗಿದ್ದವು.

'ಹೋಗ್ಲಿ ಬಿಡಿ ಋತು, ಆಕಸ್ಮಿಕವಾಗಿ ಬೆಕ್ಕು ಒಳಗೆ ಬಂದಿರಬೇಕು. ದೀಪ ಹಚ್ಚುವ ಸಮಯವೆಂದು ಹೊರಬಾಗಿಲನ್ನು ತೆರೆದು ಇಟ್ಟಿದ್ದೆವಲ್ಲಾ, ಬಂಗಲೆಯ ಸುತ್ತಾ ಎಷ್ಟೊಂದು ಮರಗಳಿವೆ, ಆಗೀಗ ಹೆಗ್ಗಣಗಳು ಮರದ ಕೆಳಗಿನ ಮಣ್ಣನ್ನು ತೋಡಿ ರಂಧ್ರವನ್ನು ಮಾಡಿರ್ತವೆ, ಅಂಥ ಹೆಗ್ಗಣಗಳನ್ನು ಹಿಡಿಯಲು ಬಂದ ಕಪ್ಪುಬೆಕ್ಕು ಆಕಸ್ಮಿಕವಾಗಿ ಬಂಗಲೆಯೊಳಗೆ ನುಗ್ಗಿರಬೇಕು. ಅದಕ್ಕೆಲ್ಲಾ ಹೆದರಿಕೊಳ್ತಾರಾ, ಹೇಮಂತ ಬರುವ ಹೊತ್ತಾಗಿದೆ, ನೀನು ಹೀಗೆ ಅಳುಮುಖ ಮಾಡಿಕೊಂಡಿರ್ಬೇಡ....' ತೋರಿಕೆಗೆ ಕಲಾವತಿ ಋತುವನ್ನು ಸಮಾಧಾನ ಪಡಿಸಿದರು.

ಆದರೆ ಕಲಾವತಿ ಯಾವ ವಿಷಯ ಹೇಮಂತನಿಗೆ ತಿಳಿಯಬಾರದೆಂದು ಹೇಳಿದ್ದರೋ ಆ ವಿಷಯ ಹೇಮಂತನಿಗೆ ತಿಳಿದುಹೋಗಿತ್ತು! ಋತು ಚೀರುವ ವೇಳೆಗೆ ಆಗಷ್ಟೇ ತನ್ನ ಬೈಕನ್ನು ಪಾರ್ಕ್ ಮಾಡಿ ಬಂಗಲೆಯೊಳಗೆ ಕಾಲಿರಿಸುತ್ತಿದ್ದ ಅವನನ್ನು ಪುರುಷೋತ್ತಮರು ಸ್ವಾಗತಿಸುತ್ತಿದ್ದರು.

ಯಾರೋ ಚೀರಿದ ಸದ್ದು ಅವರಿಬ್ಬರ ಕಿವಿಗಳಿಗೂ ಬಿದ್ದಿತ್ತು. ಅದನ್ನು ಕೇಳಿ ಪುರುಷೋತ್ತಮರ ಹುಬ್ಬುಗಳು ಪ್ರಶ್ನಾರ್ಥಕವಾಗಿ ಗಂಟಿಕ್ಕಿದರೆ ಅದರತ್ತ ಹೆಚ್ಚು ಗಮನ ಕೊಡದಂತೆ ಹೇಮಂತನೂ ನಟಿಸುತ್ತಿದ್ದ.

'ಬರ್ಬೇಕು, ಪ್ರೈವೇಟ್ ಡಿಟೆಕ್ಟಿವ್ ಹೇಮಂತ್‌ಕುಮಾರ್....ಈ ಕೋಟೆ ಬಂಗಲೆಯ ಭಾವೀ ಅಳಿಯ...' ಎಂದ ಪುರುಷೋತ್ತಮರು ಹೇಮಂತನ ಕೈ ಕುಲುಕಿ ಆದರದಿಂದ ಬರಮಾಡಿಕೊಂಡರು.

ಚುರುಕು ಕಂಗಳು, ಎಣ್ಣೆಗಪ್ಪು ಮೈ ಬಣ್ಣದ, ಉಕ್ಕಿನಂತಹ ಸದೃಢ ದೇಹದ ಹೇಮಂತ ಅವರಿಗೆ ಇಷ್ಟವಾದ. ತನ್ನ ಎಂದಿನ ಜೀನ್ಸ್ ಪ್ಯಾಂಟು, ಟೀ ಶರ್ಟ್‌ನಲ್ಲಿ ಸರಳವಾಗಿ ಕಂಡ ಅವನತ್ತ ಮೆಚ್ಚುಗೆಯ ನೋಟ ಹರಿಸಿದರು. ಕೋಟೆ ಬಂಗಲೆಯ ಕೋಮಲವಾದ ರಾಜಕುಮಾರಿ ಋತು ಇವನಿಗೆ ಒಲಿದಿದ್ದರಲ್ಲಿ ಆಶ್ಚರ್ಯವೇನೂ ಇಲ್ಲವೆನಿಸಿತು.

ಹೇಮಂತನಿಗೂ ಪುರುಷೋತ್ತಮ ಇಷ್ಟವಾದರು. ಒಂದೆರಡು ಬಾರಿ ಅವರನ್ನು ದೂರದಿಂದ ನೋಡಿದ್ದು ಬಿಟ್ಟರೆ ಇದೇ ಮೊದಲ ಬಾರಿಗೆ ಅವರನ್ನು ಹತ್ತಿರದಿಂದ ನೋಡುತ್ತಿದ್ದನು. ಬಂಗಲೆ....ಬಂಗಲೆಯ ಗಂಭೀರತೆ....ಅಲ್ಲಿನ ಅಚ್ಚುಕಟ್ಟು, ಅಲ್ಲಿ ಬೆಳಗುತ್ತಿದ್ದ ಅಸಂಖ್ಯ ಹಣತೆಗಳ ಪ್ರಭೆ ಅವನ ಹೃದಯ

## ಇಲ್ಲಿಯವರೆಗೆ



ಹೇಮಂತ ಡಿಟೆಕ್ಟಿವ್ ಆಗಿ ಋತು ಕಾಲೇಜಿಗೆ ಬರುತ್ತಾನೆ. ಬಳಿಕ ರಮ್ಯ ಹಾಗೂ ಋತು ಅವರನ್ನು ಅಪಹರಿಸುವ ನಾಟಕ ಮಾಡಿ ಮನೆಗೆ ಕರೆಸಿಕೊಳ್ಳುತ್ತಾನೆ. ಇಬ್ಬರೂ 13 ವರ್ಷಗಳ ನಂತರ ಭೇಟಿಯಾಗುವುದಲ್ಲದೆ ಮದುವೆಗೆ ನಿರ್ಧಾರವನ್ನೂ ಮಾಡುತ್ತಾರೆ. ಈ ಬಗ್ಗೆ ಮಾತನಾಡಲು ಕೋಟೆ ಬಂಗಲೆಗೆ ಬರುವಂತೆ ಆಹ್ವಾನಿಸಲಾಗುತ್ತದೆ. ಹೇಮಂತನನ್ನು ಮದುವೆಯಾಗುವ ನಿರ್ಧಾರವನ್ನು ಚಿಕ್ಕಮ್ಮನಿಗೆ ತಿಳಿಸುತ್ತಾಳೆ. ಸಿಹಿಸುದ್ದಿ ಕೇಳಿ ಮನೆಯಲ್ಲಿ ಎಲ್ಲರೂ ಖುಷಿಯಾಗುತ್ತಾರೆ. ಪ್ರಿನ್ಸಿಪಾಲ್ ಭುವನೇಶ್ವರಿ ಅವರಿಗೂ ಋತುವಿನ ಈ ನಿರ್ಧಾರ ಖುಷಿಯಾಗಿ ಅಭಿನಂದನೆ ಸಲ್ಲಿಸುತ್ತಾರೆ. ಶನಿವಾರ ಹೇಮಂತ ಬರುವ ಸಮಯದಲ್ಲಿ ಕೋಟೆ ಬಂಗಲೆಗೆ ಬರುವಂತೆ ಋತು ರಮ್ಯಳನ್ನು ಕೂಡ ಆಹ್ವಾನಿಸುತ್ತಾಳೆ.